# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1831 |
| ಮಾನ್ಯ ಸದಸ್ಯರ ಹೆಸರು | ಡಾ: ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 23.03.2026 |
| ಉತ್ತರಿಸುವ ಸಚಿವರು | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ನಗರದಲ್ಲಿರುವ "ನಮ್ಮ ಕ್ಲಿನಿಕ್"ಗಳ ಸಂಖ್ಯೆ ಎಷ್ಟು; ಸದರಿ ಕ್ಲಿನಿಕ್‌ಗೆ ದಿನನಿತ್ಯ ಸರಾಸರಿ ಎಷ್ಟು ರೋಗಿಗಳು ಭೇಟಿ ನೀಡುತ್ತಾರೆ; | ಬೆಂಗಳೂರು ನಗರದಲ್ಲಿ ಒಟ್ಟು 241 "ನಮ್ಮ ಕ್ಲಿನಿಕ್" ಗಳು ಕಾರ್ಯನಿರ್ವಹಿಸುತ್ತಿದ್ದು, ಪ್ರತಿ ಕ್ಲಿನಿಕ್‌ಗೆ ದಿನ ನಿತ್ಯ ಸರಾಸರಿ 35 ರಿಂದ 40 ರೋಗಿಗಳು ಭೇಟಿ ನೀಡುತ್ತಾರೆ. |
| ಆ | "ನಮ್ಮ ಕ್ಲಿನಿಕ್"ಗಳಲ್ಲಿ ಯಾವ ಯಾವ ವೈದ್ಯಕೀಯ ಸೇವೆಗಳನ್ನುರೋಗಿಗಳಿಗೆ ಒದಗಿಸಲಾಗುತ್ತಿದೆ; ಹಾಗೂ ಯಾವ್ಯಾವ ಹುದ್ದೆಗಳು ಇರುತ್ತವೆ; ಎಲ್ಲವೂ ಭರ್ತಿಯಾಗಿವೆಯೇ; ಖಾಲಿ ಹುದ್ದೆಗಳು ಎಷ್ಟು; | "ನಮ್ಮ ಕ್ಲಿನಿಕ್"ಗಳಲ್ಲಿ 12 ವೈದ್ಯಕೀಯ ಸೇವೆಗಳನ್ನು ರೋಗಿಗಳಿಗೆ ಒದಗಿಸಲಾಗುತ್ತಿದೆ. ಅವು ಈ ಕೆಳಕಂಡಂತಿವೆ.<br>1. ಗರ್ಭಿಣಿ ಮತ್ತು ಜನನ ಸಮಯದ ಆರೈಕೆ.<br>2. ನವಜಾತ ಮತ್ತು ಶಿಶುವಿನ ಸಮಗ್ರ ಆರೋಗ್ಯ ಆರೈಕೆ.<br>3. ಬಾಲ್ಯ ಮತ್ತು ಹದಿಹರೆಯದವರ ಸಮಗ್ರ ಆರೋಗ್ಯ ಸೇವೆಗಳು, ಸಾರ್ವತ್ರಿಕ ಲಸಿಕಾಕರಣ ಸೇವೆಗಳು.<br>4. ಕುಟುಂಬ ಕಲ್ಯಾಣ, ಗರ್ಭನಿರೋಧಕ ಸೇವೆಗಳು ಮತ್ತು ಇತರ ಸಂತಾನೋತ್ಪತ್ತಿ ಆರೋಗ್ಯ ಸೇವೆಗಳು.<br>5. ಸಾಂಕ್ರಾಮಿಕ ರೋಗಗಳ ನಿರ್ವಹಣೆ.<br>6. ಸಾಮಾನ್ಯ ಮತ್ತು ಸಣ್ಣ ಪ್ರಮಾಣದ ಕಾಯಿಲೆಗಳಿಗೆ ಹೊರ ರೋಗಿ ಸೇವೆಗಳು<br>7. ಸಾಂಕ್ರಾಮಿಕ( ಟಿ.ಬಿ. ಕುಷ್ಠ ಇತ್ಯಾದಿ) ಮತ್ತು ಅಸಾಂಕ್ರಾಮಿಕ ರೋಗಗಳ (ಮಧುಮೇಹ, ಹೆಚ್ಚು ರಕ್ತದೊತ್ತಡ, ದೀರ್ಘಾವಧಿ ಶ್ವಾಸಕೋಶ ಕಾಯಿಲೆ, ಕೀಲು ನೋವು ಮತ್ತು ಸಂಧಿವಾತ, ಬಾಯಿ, ಸ್ತನ ಮತ್ತು ಗರ್ಭಕಂಠ ಕ್ಯಾನ್ಸರ್ ಇತ್ಯಾದಿ) ಸ್ಕ್ರೀನಿಂಗ್, ತಡೆಗಟ್ಟುವಿಕೆ ಮತ್ತು ನಿರ್ವಹಣೆ<br>8. ಮೂಲಭೂತ ಬಾಯಿ ಆರೋಗ್ಯ ಸೇವೆಗಳು.<br>9. ಮೂಲಭೂತ ನೇತ್ರ ಹಾಗೂ ಕಿವಿ, ಮೂಗು, ಗಂಟಲು ಆರೋಗ್ಯ ಆರೈಕೆ ಸೇವೆಗಳು.<br>10. ಮಾನಸಿಕ ಆರೋಗ್ಯದ ಮೂಲಭೂತ ಸ್ಕ್ರೀನಿಂಗ್ ಸೇವೆಗಳು.<br>11. ಮೂಲಭೂತ ವೃದ್ಧಾಪ್ಯ ಆರೈಕೆ ಮತ್ತು ಉಪಶಮನಕಾರಿ ಆರೈಕೆ ಸೇವೆಗಳು.<br>12. ಸುಟ್ಟ ಗಾಯಗಳು, ಅಪಘಾತ, ಮತ್ತಿತರ ಗಾಯಗಳು ಸೇರಿದಂತೆ ತುರ್ತು ವೈದ್ಯಕೀಯ ಸೇವೆಗಳು.<br><br>"ನಮ್ಮ ಕ್ಲಿನಿಕ್"ಗಳಲ್ಲಿ ಈ ಕೆಳಕಂಡ 05 ಹುದ್ದೆಗಳು ಕಾರ್ಯನಿರ್ವಹಿಸುತ್ತಿವೆ. |

| ಕ್ರ.ಸ. | ಹುದ್ದೆಗಳು | ಸಂಖ್ಯೆ |
|---|---|---|
| 1 | ವೈದ್ಯರು | 01 |
| 2 | ಶುಶ್ರೂಷಕರು | 01 |
| 3 | ಪ್ರಯೋಗ ಶಾಲಾ ತಂತ್ರಜ್ಞರು | 01 |
| 4 | ಕಿರಿಯ ಆರೋಗ್ಯ ಸುರಕ್ಷಣಾಧಿಕಾರಿ | 01 |
| 5 | ಗ್ರೂಪ್ - ಡಿ | 01 |

ಬೆಂಗಳೂರು ನಗರದ ಒಟ್ಟು 241 "ನಮ್ಮ ಕ್ಲಿನಿಕ್" ಗಳಲ್ಲಿ 2 ವೈದ್ಯರ ಹಾಗೂ 02 ಪ್ರಯೋಗ ಶಾಲಾ ತಂತ್ರಜ್ಞರ ಹುದ್ದೆಗಳು ಖಾಲಿಯಿದೆ.

| | | |
|---|---|---|
| ಇ | ಬೆಂಗಳೂರಿನಲ್ಲಿ "ನಮ್ಮ ಕ್ಲಿನಿಕ್"ಗಳು ಅಗತ್ಯ ಮೂಲ ಸೌಕರ್ಯಗಳ ಕೊರತೆ ಎದುರಿಸುತ್ತಿರುವುದು ಹಾಗೂ ಇವುಗಳ ಸ್ಥಾಪನೆಯ ಮೂಲ ಆಶಯವೂ ಸಮರ್ಪಕವಾಗಿ ಈಡೇರದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br><br>"ನಮ್ಮ ಕ್ಲಿನಿಕ್" ಗೆ ಭೇಟಿ ನೀಡುವ ರೋಗಿಗಳಿಗೆ ಉಚಿತ ಆರೋಗ್ಯ ತಪಾಸಣೆ, ಉಚಿತ ಔಷಧ ವಿತರಣೆ, ಉಚಿತ ಪ್ರಯೋಗಶಾಲೆ ಸೇವೆಗಳು, ಟೆಲಿ ಕನ್ಸಲ್‌ಟೇಷನ್ ಸೇವೆ, ಕ್ಷೇಮ ಚಟುವಟಿಕೆ ಹಾಗೂ ಉಚಿತ ರೆಫರಲ್ ಸೇವೆಯನ್ನು ಒದಗಿಸಲಾಗುತ್ತಿದೆ ಮತ್ತು ಜಿ.ಬಿ.ಎ. ವೆಬ್‌ಸೈಟ್ ನಲ್ಲಿ "ನಮ್ಮ ಕ್ಲಿನಿಕ್" ಗಳ GIS Location ವಿವರಗಳನ್ನು ಪ್ರಚುರಪಡಿಸಲಾಗಿದೆ. |
| ಈ | ಬಂದಿದ್ದರೆ ಅಗತ್ಯ ಮೂಲ ಸೌಲಭ್ಯ ಒದಗಿಸಿ ರೋಗಿಗಳು ಸಾಕಷ್ಟು ಸಂಖ್ಯೆಯಲ್ಲಿ ಬರುವಂತೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು? (ವಿವರ ನೀಡುವುದು) | |

**ಆಕುಕ 64 ಎಸ್‌ಎಂಎಂ 2026**

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಸಚಿವರು